ಓ ಎಸ್ 16/2014
ಪಿ ಡಬ್ಲ್ಯೂ-2 ಕೆ ಸೂರ್ಯನಾರಾಯಣ ಭಟ್

ದಿನಾಂಕ 13.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು : ಪ್ರತಿವಾದಿ ನಂ 4 ರಿಂದ 6 ಮತ್ತು 8 ರ ಪರ ಕೆ ಆರ್ ಯು ವಕೀಲರಿಂದ

10. ಈ ದಾವದ ಎ ಶೆಡ್ಯೂಲ್ ಭೂಮಿಗಳಲ್ಲಿ ಕೃಷಿಯೇತರ ಭೂಮಿಯಲ್ಲಿ ಭೂ ಪರಿವರ್ತನೆ ಆದ ಭೂಮಿಗಳು ಇದೆ . ನಾನು ಖರೀದಿ ಮಾಡುವುದಕ್ಕಿಂತ ಮುಂಚೆ ಕೃಷಿಯೇತರ ಭೂಮಿ ಎಂದು ಭೂ ಪರಿರ್ವತನೆ ಆಗಿದೆ . ಭೂ ಪರಿವರ್ತನೆ ಆದ ಜಮೀನಿಗೆ ಕುಮ್ಕಿ ಹಕ್ಕು ಇದೆ ಎಂದು ಸಾಧನೆ ಇರುವುದಿಲ್ಲ . ಸಾಕ್ಷಿ ಮುಂದುವರಿದು ಖೇದಿಂ ವರ್ಗದ ಜಮೀನಿಗೆ ಕುಮ್ಕಿ ಹಕ್ಕು ಇದೆ ಎನ್ನುತ್ತಾರೆ . ಕೃಷಿಯೇತರ ಜಮೀನು ಕೂಡ ನನ್ನ ಪ್ರಕಾರ ಖೇದಿಂ ವರ್ಗದ ಜಮೀನು . ಭೂ ಪರಿರ್ವತನೆ ಆದ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಖದೀಂ ವರ್ಗ ಜಮೀನು ಇದೆ . ಸಾಕ್ಷಿ ಮುಂದುವರಿದು ಸದರಿ ಜಮೀನು ನೇರವಾಗಿದೆ ಎನ್ನುತ್ತಾರೆ . ಎ ಶೆಡ್ಯೂಲ್ ಭೂ ಪರಿವರ್ತನೆ ಆದ ಜಾಗ ಮತ್ತು ಭೂ ಪರಿವರ್ತನೆ ಆಗದೆ ಇರುವ ಜಾಗವೂ ನಕಾಶೆಯಲ್ಲಿ ಎಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ನಕಾಶೆ ನೋಡಿ ಹೇಳಲು ಬರುವುದಿಲ್ಲ ಎನ್ನುತ್ತಾರೆ . ನಿಪಿ-24 ಅಪೀಲು ನಂಬ್ರ ಆರ್ ಎ 6/2014-15 ಏನಾಗಿದೆ ಎಂದು ನನಗೆ ನೆನಪು ಬರುತ್ತಿಲ್ಲ . ಸಾಕ್ಷಿ ಮುಂದುವರಿದು ಸಹಾಯಕ ಆಯುಕ್ತರ ನ್ಯಾಯಾಲಯ ಸರಿಯಾದ ತೀರ್ಪು ಕೊಟ್ಟಿಲ್ಲ . ಆ ಕಾರಣಕ್ಕೆ ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ . ಸಹಾಯಕ ಆಯುಕ್ತರ ನ್ಯಾಯಾಲಯದ ತೀರ್ಪಿನ ಬಗ್ಗೆ ವಕೀಲರಲ್ಲಿ ಕೇಳಿ ಹೇಳಬೇಕು ಎನ್ನುತ್ತಾರೆ . ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ ಬಗ್ಗೆ ದಾಖಲೆ ಇರಬಹುದು . ಸಹಾಯಕ ಆಯುಕ್ತರ ನ್ಯಾಯಾಲಯದ ಆದೇಶದ ಬಗ್ಗೆ ತಡೆಯಾಜ್ಞೆ ಆಗಿಲ್ಲ . ಪೋಲಿಸರಿಗೆ ಎಷ್ಟು ಸಲ ದೂರು ಕೊಟ್ಟಿದ್ದೇನೆ ಎಂದು ಲೆಕ್ಕ ಹಾಕಲು ಆಗುವುದಿಲ್ಲ . ಸಾಕ್ಷಿ ಮುಂದುವರಿದು ನನಗೆ ಯಾವಾಗೆಲ್ಲ ತೊಂದರೆ ಕೊಟ್ಟಿದ್ದಾರೆ ಆವಾಗ ನಾನು ದೂರನ್ನು ಸಲ್ಲಿಸಿದ್ದೇನೆ . ನ್ಯಾಯಾಲಯಕ್ಕೆ ನಾನು ಎಷ್ಟು ದೂರಿನ ಪ್ರತಿಗಳನ್ನು ಸಲ್ಲಿಸಿದ್ದೇನೆ ಎಂದು ಹೇಳಲು ಆಗುವುದಿಲ್ಲ . ನನ್ನ ಸುಳ್ಳು ಕೇಸಿಗೆ ಪೂರಕವಾಗಿ ಬಹಳಷ್ಟು ದೂರಿನ

ಪ್ರತಿಗಳನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ನನಗೆ ಹಕ್ಕು ಇಲ್ಲದ ಭೂಮಿಯಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ . ವಕೀಲರ ಮುಖಾಂತರ ಜಿಲ್ಲಾಧಿಕಾರಿಯವರಿಗೆ ನೋಟಿಸ್ ಕಳುಹಿಸಿಲ್ಲ . ನಿಪಿ-57 ಯಾಕೆ ಕಳುಹಿಸಿದ್ದು ಎಂದರೆ ನನಗೆ ಇಂಗ್ಲೀಷ್ ಬರುವುದಿಲ್ಲ ಎನ್ನುತ್ತಾರೆ . ನಿಪಿ-57 ರಲ್ಲಿ ಏನು ಇದೆ ಎಂದು ನಮ್ಮ ವಕೀಲರು ನನಗೆ ಹೇಳಿದರೆ ಅರ್ಥ ಮಾಡಿಕೊಂಡು ಹೇಳುತ್ತೇನೆ . ನಿಪಿ-57 ಕಳುಹಿಸುವಾಗ ಬಿ ಶೆಡ್ಯೂಲ್ ಭೂಮಿಯಲ್ಲಿ ನಾಲ್ಕನೇ ಪ್ರತಿವಾದಿಗೆ ದರ್ಖಾಸ್ತು ಆಗಿದೆ ಎಂದರೆ ಸಾಕ್ಷಿಯು ಡ್ಯುಬ್ಲಿಕೇಟ್ ಆಗಿ ಮಾಡಿಕೊಂಡಿದ್ದಾರೆ ಎನ್ನುತ್ತಾರೆ . ನಾನು ಹಾಕಿದ ದಾಖಲೆಗಳು ಪ್ರತಿವಾದಿ ನಂಬ್ರ 4 ರವರ ಜಾಗವನ್ನು ಕಬಳಿಸಲು ಸೃಷ್ಟಿ ಮಾಡಿದ ದಾಖಲೆಗಳು ಎಂದರೆ ಸರಿಯಲ್ಲ . ಪ್ರತಿವಾದಿ ನಂಬ್ರ 5 ರಿಂದ 8 ರವರು ಜನವರಿ 3 2014 ರಂದು ನಾನು ಕೆಲಸ ಮಾಡುತ್ತಿರುವಾಗ ಬಂದು ನನಗೆ ಹೆದರಿಸಿ ತೊಂದರೆ ಮಾಡಿರುತ್ತಾರೆ . ಅವರು ನಮ್ಮ ಮನೆಯಿಂದ ಸುಮಾರು 1.5 ರಿಂದ 2.00 ಕಿ. ಮೀಟರ್ ದೂರದಲ್ಲ್ ಇದ್ದಾರೆ . ಪ್ರತಿವಾದಿ ನಂಬ್ರ 5 ರಿಂದ 8 ರವರು ಬಂದಿದ್ದಾರೆ ಎಂದು ತೋರಿಸಲು ನನ್ನ ಬಳಿ ಸಾಕ್ಷಿ ಇವೆಯಾ ಎಂದರೆ ತೋರಿಸಲು ಕಷ್ಟ ಇದೆ ಎನ್ನುತ್ತಾರೆ . ಜನವರಿ 3 2014 ರಂದು ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ . ನಾನು ದಾವದಲ್ಲಿ ಹೇಳಿದ ಘಟನೆ ನಾನು ಸೃಷ್ಟಿ ಮಾಡಿಕೊಂಡ ಘಟನೆ ಎಂದರೆ ಸರಿಯಲ್ಲ .

11. ಫಾರಂ ನಂಬ್ರ 50 ಮತ್ತು ಫಾರಂ ನಂಬ್ರ 53 ರ ವ್ಯತ್ಯಾಸ ನನಗೆ ಗೊತ್ತಿಲ್ಲ . ಸರಕಾರದ ಭೂಮಿಯನ್ನು ನಾನು ಕ್ರಯ ಮಾಡಿಕೊಂಡಿಲ್ಲ . ನಾನು ಹೇಳಿದ ಆಗೆ ಬಿ ಶೆಡ್ಯೂಲ್ ಆಸ್ತಿಯಲ್ಲಿ ಯಾವುದೇ ಕೃತಗಳು ಇಲ್ಲ ಎಂದರೆ ಸರಿಯಲ್ಲ . ನಾನು ಜಿ ಪಿ ಎ ನ್ನು ನನ್ನ ತಂದೆಯಿಂದ ಪಡೆದುಕೊಂಡು ಉದ್ದೇಶ ಪೂರ್ವಕವಾಗಿ ನಾನು ಅವರನ್ನು ಈ ಪ್ರಕರಣದಿಂದ ದೂರ ಇಟ್ಟು ಆಶ್ರಮದಲ್ಲಿ ಇಟ್ಟಿದ್ದೇನೆ ಎಂದರೆ ಸರಿಯಲ್ಲ . ಈಗ ನನ್ನ ತಂದೆ ಕನ್ಯಾನ ಆಶ್ರಮದಲ್ಲಿ ಇದ್ದಾರೆ . ಸಾಕ್ಷಿ ಮುಂದುವರಿದು ನನ್ನ ಅಣ್ಣ ಅವರನ್ನು ಕರೆದುಕೊಂಡು ಹೋಗಿದ್ದು ಅವರಿಗೆ ಸೆಟ್ ಆಗದೇ ಇದ್ದಿದ್ದರಿಂದ ಅವರನ್ನು ಅಲ್ಲಿ ಇಡಲಾಗಿದೆ . ಅಡಂಗಾಲು ಕಾಫಿ ನನ್ನ ಹತ್ತಿರ ಇರಬಹುದು . ಬಿ ಶೆಡ್ಯೂಲ್ ಐಟಂ ನಂಬ್ರ 2ರ ಸರ್ವೆ ನಂಬ್ರ 217/1 ಅದು ಡಿ ಸಿ ಮನ್ನ ಜಾಗ ಎಂದರೆ ಸರಿಯಲ್ಲ . ಸಾಕ್ಷಿ

ಮುಂದುವರಿದು ಅವರು ಡಿ ಸಿ ಮನ್ನ ಆಗಿದೆ ಎಂದು ಡ್ಯುಬ್ಲಿಕೇಟ್ ಮಾಡಿಸಿಕೊಂಡಿದ್ದಾರೆ ಎನ್ನುತ್ತಾರೆ . ಸಾಕ್ಷಿ ಮುಂದುವರಿದು ತಹಶೀಲ್ದಾರ ಮತ್ತು ಕಂದಾಯ ನೀರಿಕ್ಷಕರು ಇದು ಡಿ ಸಿ ಮನ್ನ ಜಾಗ ಅಲ್ಲ ಸದ್ರಿ ಜಮೀನು ವಾದಿಗೆ ಕುಮ್ಕಿ ಆಗಿ ಬರುತ್ತದೆ ಎಂದು ತೋರಿಸಿದ್ದಾರೆ ಎನ್ನುತ್ತಾರೆ . ಡಿ ಸಿ ಮನ್ನ ಅಲ್ಲ ಎಂದು ಆದೇಶ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು . ಎ ಶೆಡ್ಯೂಲ್ ವರ್ಗ ಜಮೀನುಗಳಲ್ಲಿ ಏನು ತಕರಾರು ಇಲ್ಲ . ಪ್ರತಿವಾದಿಗಳು ಎ ಶೆಡ್ಯೂಲ್ ವರ್ಗ ಜಮೀನುಗಳಿಗೇ ಯಾವುದೇ ರೀತಿ ತಂಟೆ ತಕರಾರು ಮಾಡಿಲ್ಲ . ಎ ಶೆಡ್ಯೂಲ್ ಆಸ್ತಿಗಳಲ್ಲಿ ಸಾರ್ವಜನಿಕ ದಾರಿ ಇದೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು ಸದ್ರಿ ಜಾಗದಲ್ಲಿ ಉಮ್ಮರ್ ಫಾರೂಕ್ ಅವರಿಗೆ ಖರೀದಿ ಕೊಟ್ಟಿದ್ದು ಅವರಿಗೆ ಹೋಗಿ ಬರಲು ದಾರಿ ಮಾಡಿಕೊಟ್ಟಿದ್ದೇನೆ ಅದಕ್ಕೂ ಈ ಕೇಸಿಗೂ ಸಂಬಂಧವಿಲ್ಲ ಎನ್ನುತ್ತಾರೆ . ಉಮ್ಮರ್ ಫಾರೂಕ್ ಅವರಿಗೆ ದಾರಿ ಹಕ್ಕು ಇದೆ ಎಂದು ಈ ವಾದ ಪತ್ರದಲ್ಲಿ ನಾನು ಹೇಳಿಲ್ಲ ಏಕೆಂದರೆ ಅದರ ಅವಶ್ಯಕತೆ ಇಲ್ಲ . ನಾನು ವ್ಯಾಜ್ಯದಲ್ಲಿ ಕೇಳಿದ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ . ದಾವ ಬಿ ಶೆಡ್ಯೂಲ್ ಆಸ್ತಿಯಲ್ಲಿ ನನಗೆ ಯಾವುದೇ ರೀತಿಯ ಕುಮ್ಕಿ ಹಕ್ಕು ಇಲ್ಲ ಎಂದರೆ ಸರಿಯಲ್ಲ . ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ .

ಪ್ರತಿವಾದಿ ನಂಬ್ರ **1** ರಿಂದ **3** ರ ಪರ ಎ ಜಿ ಪಿ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ .

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಬಂಟ್ವಾಳ,